**ಓಎಸ್. ನಂ.*222/2023***

**ಪಿಡಬ್ಲೂ:*01***

**ಇಂದು ದಿನಾಂಕ:*23.11.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಬಿ.ವಿ.ಜೆ.ವಕೀಲರಿಂದಃ**

ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ ಎಂದರೆ ಸರಿ. ಸರ್ವೆ ನಂ.1/57 ಕ್ಕೆ ಸಂಬಂಧಿಸಿದಂತೆ ಕೇಸು ಹಾಕಿದ್ದೇನೆ. ಸದರಿ ಜಮೀನು ನನ್ನ ತಂದೆಗೆ ಸೇರಿದೆ. ಸದರಿ ಆಸ್ತಿಯನ್ನು ನಮ್ಮ ತಂದೆಗೆ ಸರ್ಕಾರದಿಂದ ಕ್ರಯ ಪತ್ರದ ಮೂಲಕ 1980 ರಲ್ಲಿ ಕೊಟ್ಟಿದ್ದೆ. ಆ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅದರಲ್ಲಿ 3 ಎಕರೆ 20 ಗುಂಟೆ ಇದೆ. ಸದರಿ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ನಾನು ಸ್ವಾಧೀನ ಇಲ್ಲದ ಕಾರಣ ಚೆಕ್ಕುಬಂದಿ ಗೊತ್ತಿಲ್ಲ ಎಂದರೆ ಸ್ವಾಧೀನ ಇದ್ದೀನಿ. ವಾದ ಪತ್ರದಲ್ಲಿ ಚೆಕ್ಕುಬಂದಿ ನಮೂದಿಸಿಲ್ಲ. ದಾವಾ ಆಸ್ತಿ ನನ್ನ ತಂದೆ ಅಥವಾ ಅವರ ಮರಣದ ನಂತರ ನನ್ನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಸರ್ವೆ ನಂ.1/58 ಇದೆ. ಅದು ಯಾರಿಗೆ ಸೇರಿದೆ ಅಂತ ಪಹಣಿ ನೋಡಿಲ್ಲ. ನ್ಯಾಯಾಲಯಕ್ಕೆ ಮ್ಯುಟೇಷನ್, ಸ್ಕೆಚ್, ಪಹಣಿ, ಕಂದಾಯ ರಸೀದಿ, ನನ್ನ ತಂದೆಯ ಮರಣ ದೃಢಿಕರಣ ಪತ್ರ ಇವುಗಳನ್ನು ಕೊಟ್ಟಿದ್ದೇನೆ. 2020 ರವರೆಗೂ ಕಂದಾಯ ಕಟ್ಟಿದ್ದೇನೆ, ಆ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ. ಮಲ್ಲೇಶ್ ವಿರುದ್ಧ ಕೇಸು ಹಾಕಿದ್ದೇನೆ. ಅವರ ಆಸ್ತಿಯ ನಂಬರ್ ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಆಸ್ತಿಯನ್ನು ಸರ್ವೆ ಮಾಡಿಸಿಲ್ಲ. ಅಳತೆ ಮಾಡಿಸಲು ಅರ್ಜಿ ಹಾಕಿದ್ದೆ, ಆದರೆ ಅವರು ಮಾಡುತ್ತೇನೆ ಮಾಡುತ್ತೇನೆ ಅಂತ ಹೇಳಿ ಮಾಡಿರುವುದಿಲ್ಲ. ಸರ್ವೆ ಮಾಡಿಸಲು ಅರ್ಜಿ ಸಲ್ಲಿಸಿದ್ದ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಅಂತಹ ದಾಖಲೆ ನಮ್ಮ ವಕೀಲರ ಬಳಿ ಇದೆ. ಸರ್ವೆ ನಂ.1 ರಲ್ಲಿ ಒಟ್ಟು 500 ಚಿಲ್ಲರೆ ಎಕರೆ ಇದೆ. ಸದರಿ ಜಮೀನು ದುರಸ್ಥು ಅಥವಾ ಪಕ್ಕಾ ಪೋಡಿ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ.1 ರಲ್ಲಿ ಎಷ್ಟು ಪೋಡುಗಳು ಆಗಿವೆ ಅಂತ ಗೊತ್ತಿಲ್ಲ. ಯಾವ ಯಾವ ಪೋಡುಗಳಲ್ಲಿ ಯಾರು ಯಾರು ಸ್ವಾಧೀನ ಇದ್ದಾರೆ ಅಂತ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸುಳ್ಳು. ಪ್ರತಿವಾದಿಗೆ ಸೇರಿದ ಜಮೀನನ್ನು ಹೊಡೆದುಕೊಳ್ಳಬೇಕೆಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಗೆ ಸೇರಿದ್ದು, ಅವರೇ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ.

**ಓಎಸ್. ನಂ.*222/2023***

**ಪಿಡಬ್ಲ್ಯೂ:*01***

ಪ್ರತಿವಾದಿ ಆಸ್ತಿಯ ಹೊಡೆದುಕೊಳ್ಳಬೇಕೆಂದು ಯೋಚಿಸಿ ಬೆಂಗಳೂರಿನಿಂದ ಬಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗಾಗಲಿ ಅಥವಾ ನನ್ನ ತಂದೆಗಾಗಲಿ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**